# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:01–10–2024 ರಂದು ಮಂಗಳವಾರ ಪೂರ್ವಾಹ್ನ:11.00 ಗಂಟೆಗೆ ವಿಶ್ವವಿದ್ಯಾಲಯದ **ಆಡಳಿತ ಭವನದ ಹೊಸ "ಸಿಂಡಿಕೇಟ್ ಸಭಾಂಗಣದಲ್ಲಿ"** ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೋಪಿನಾಥ್, ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 3. | ಡಾ. ವಿಷ್ಣುಮೂರ್ತಿ, ಕೆ.ಎ., ಜಂಟಿ ನಿರ್ದೇಶಕರು | ಸದಸ್ಯರು |
| 4. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 5. | ಡಾ. ಲಕ್ಷ್ಮೀಶ, ಎ.ಎಸ್., ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ತ್ರಿಪುರ ಮಹೇಶ್ವರ ಎಂ., ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಉಮೇಶ್, ಕೆ., ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಮುಷ್ತಾಕ್ ಅಹಮದ್, ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಮಘು, ಜಿ., ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ವಿನ್‌ಸೆಂಟ್ ಕಾರ್ಡೋಜ, ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಸಣ್ಣಹನುಮಪ್ಪ, ಜಿ., ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಅನಂತ, ಎಸ್., ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಜಿ. ಪ್ರಶಾಂತ ನಾಯಕ, ಪ್ರಾಧ್ಯಾಪಕರು. | ಸದಸ್ಯರು |
| 14. | ಡಾ. ನಾಗರಾಜ, ಪ್ರಾಧ್ಯಾಪಕರು | ಸದಸ್ಯರು |
| 15. | ಡಾ. ರಾಜೇಶ್ವರ್, ಎ.ಎನ್., ಪ್ರಾಧ್ಯಾಪಕರು | ಸದಸ್ಯರು |
| 16. | ಡಾ. ಸರ್ವಮಂಗಳ, ಜಿ., ಪ್ರಾಧ್ಯಾಪಕರು | ಸದಸ್ಯರು |
| 17. | ಡಾ. ಪಾಟೀಲ್ ಸಂಗನಗೌಡ, ಎಸ್., ಪ್ರಾಧ್ಯಾಪಕರು | ಸದಸ್ಯರು |
| 18. | ಡಾ. ಗುರುಲಿಂಗಯ್ಯ, ಎಂ., ಡೀನರು, ಕಲಾ ನಿಕಾಯ | ಸದಸ್ಯರು |
| 19. | ಡಾ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 20. | ಡಾ. ಆರ್. ಹಿರೇಮಣಿನಾಯ್ಕ್, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 21. | ಡಾ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 22. | ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 23. | ಡಾ. ಜಿ. ಪ್ರಶಾಂತ ನಾಯಕ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ | ಸದಸ್ಯರು |
| 24. | ಡಾ. ಕರ್ಲೋಬನಾಯಕ, ವೈ., ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 25. | ಡಾ. ನಾಗರಾಜ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 26. | ಡಾ. ಎಸ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |

**ಗೈರು ಹಾಜರಾದ ಸದಸ್ಯರು :**

| | | |
|---|---|---|
| 1. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 2. | ಶ್ರೀ ಬಿ.ಕೆ. ಸಂಗಮೇಶ್ವರ್, ಶಾಸಕರು ಭದ್ರಾವತಿ ಕ್ಷೇತ್ರ | ಸದಸ್ಯರು |
| 3. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 4. | ಡಾ. ಲಕ್ಷ್ಮೀಶ ಎ.ಎಸ್, ಪ್ರಾಂಶುಪಾಲರು | ಸದಸ್ಯರು |
| 5. | ಡಾ. ಶೇಖರ, ಪ್ರಾಂಶುಪಾಲರು | ಸದಸ್ಯರು |

**<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>**

| | | |
|---|---|---|
| 1. | ಶ್ರೀ ಎ.ಎಲ್., ಮಂಜುನಾಥ್ ಕೆ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಪ್ರಸ್ತಾವನೆ:

ಪ್ರೊ.ಎಸ್.ಎಂ.ಗೋಪಿನಾಥ್‌ರವರು ಸಭೆಗೆ ಆಗಮಿಸಿದ್ದ ಎಲ್ಲರನ್ನೂ ಸ್ವಾಗತಿಸಿದರು. ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ನೇಮಕಗೊಂಡ ಪ್ರೊ. ಶರತ್‌ಅನಂತಮೂರ್ತಿ, ಜೇಷ್ಠತೆ ಹಾಗೂ ಸರದಿಯ ಮೇಲೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶಿತ ಪ್ರಾಧ್ಯಾಪಕರಾದ ಪ್ರೊ.ಜಿ. ಪ್ರಶಾಂತನಾಯಕ, ಪಿ.ಎಂ.ಇ. ಮಂಡಳಿಯ ನಿರ್ದೇಶಕರಾದ ಪ್ರೊ. ಆರ್ತೋಬನಾಯಕ, ವೈ. ಮತ್ತು ಹಣಕಾಸು ಅಧಿಕಾರಿಯಾಗಿ ನೇಮಕಗೊಂಡ ಪ್ರೊ.ಹೆಚ್.ಎನ್.ರಮೇಶ್ ಇವರನ್ನು ಆತ್ಮೀಯವಾಗಿ ಸ್ವಾಗತಿಸಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ವಿದ್ಯಾ ವಿಷಯಕ ಪರಿಷತ್ತಿನ ಅಧ್ಯಕ್ಷರಾಗಿ ಹಾಗೂ ಪ್ರಭಾರ ಕುಲಪತಿಯಾಗಿ ಸೇವೆ ಸಲ್ಲಿಸಿದ್ದ ಪ್ರೊ.ಎಸ್.ವಿ. ಕೃಷ್ಣಮೂರ್ತಿ, ವಯೋನಿವೃತ್ತಿ ಹೊಂದಿದ ಸದಸ್ಯರಾದ ಪ್ರೊ.ಬಿ.ಹೆಚ್.ನಾಗ್ಯಾನಾಯ್ಕ ಹಾಗೂ ಪಿ.ಎಂ.ಇ. ಮಂಡಳಿ ನಿರ್ದೇಶಕರಾಗಿದ್ದ ಪ್ರೊ.ಎಸ್.ಕೆ. ನರಸಿಂಹಮೂರ್ತಿ ಇವರುಗಳ ಸೇವೆಯನ್ನು ಸ್ಮರಿಸಿ ಅಭಿನಂದಿಸಲಾಯಿತು.

ಮಾನ್ಯ ಕುಲಪತಿಯವರು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ, ಕುಲಸಚಿವ (ಆಡಳಿತ)ರವರು ತುರ್ತು ಕಾರ್ಯನಿಮಿತ್ತ ಬೆಂಗಳೂರಿಗೆ ತೆರಳಿದ್ದು, ಕುಲಸಚಿವ (ಮೌಲ್ಯಮಾಪನ)ರವರ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿ ಸಭೆ ನಡೆಸಿಕೊಡಲಿದ್ದು, ಎಲ್ಲಾ ಸದಸ್ಯರು ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳ ಅಭಿವೃದ್ಧಿಗಾಗಿ ತಮ್ಮ ಅಮೂಲ್ಯವಾದ ಸಲಹೆ ಮತ್ತು ಸಹಕಾರ ನೀಡುವಂತೆ ಕೋರಿದರು.

## ಪ್ರಾಧಿಕಾರಗಳ ವಿಭಾಗ

**2024:ಎಸಿ–2.01:** ದಿನಾಂಕ:06-03-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:06-03-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ದೃಢೀಕರಿಸಲಾಯಿತು.

**2024:ಎಸಿ–2.02:** ದಿನಾಂಕ:06-03-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:06-03-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**2024:ಎಸಿ–2.03:** ದಿನಾಂಕ:15-07-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ (CAC) ನಡಾವಳಿಗಳ ದೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:15-07-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ (CAC) ನಡಾವಳಿಗಳನ್ನು ಪರಿಶೀಲಿಸಿ ದೃಢೀಕರಿಸಲಾಯಿತು.

**2024:ಎಸಿ–2.04:** ದಿನಾಂಕ:15-07-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ (CAC) ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು.

**ಚರ್ಚೆ:** ಸದಸ್ಯರಾದ ಡಾ.ಅನಂತ್‌ರವರು ವಿಷಯ ಸಂಖ್ಯೆ:2024:ಸಿಇಸಿ-03ರ ಕುರಿತು ಮಾತನಾಡಿ, ಸ್ನಾತಕ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸುವ ವಿಶ್ವವಿದ್ಯಾಲಯದ ಸಮಿತಿಗೆ ಸ್ನಾತಕ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳ ಪ್ರಾಂಶುಪಾಲರನ್ನು ಸದಸ್ಯರಾಗಿ ನೇಮಕ ಮಾಡಿದಲ್ಲಿ ಕಾಲೇಜುಗಳ ನೈಜ ಸಮಸ್ಯೆಗಳನ್ನು ಅರಿತು ವೇಳಾಪಟ್ಟಿ ಸಿದ್ಧಪಡಿಸಲು ಅನುಕೂಲವಾಗುತ್ತದೆ ಎಂದರು. ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಸಮಿತಿಗೆ ಸ್ನಾತಕ ಪದವಿಯ ಖಾಸಗಿ ಕಾಲೇಜಿನಿಂದ ಇಬ್ಬರು ಪ್ರಾಂಶುಪಾಲರನ್ನು ಹಾಗೂ ಸರ್ಕಾರಿ ಕಾಲೇಜಿನಿಂದ ಇಬ್ಬರು ಪ್ರಾಂಶುಪಾಲರನ್ನು ನೇಮಿಸಲು ಈಗಾಗಲೇ ನಿರ್ಣಯಿಸಿದ್ದು, ಮುಂದಿನ ಸಮಿತಿಗಳಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:15-07-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ (CAC) ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿ ಅನುಮೋದಿಸಿದ ಸಭೆಯು, ಇನ್ನು ಮುಂದೆ ಸ್ನಾತಕ ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸುವ ವಿಶ್ವವಿದ್ಯಾಲಯದ ಸಮಿತಿಗೆ ಸ್ನಾತಕ ಪದವಿಯ ಖಾಸಗಿ ಕಾಲೇಜಿನಿಂದ ಇಬ್ಬರು ಪ್ರಾಂಶುಪಾಲರನ್ನು ಹಾಗೂ ಸರ್ಕಾರಿ ಕಾಲೇಜಿನಿಂದ ಇಬ್ಬರು ಪ್ರಾಂಶುಪಾಲರನ್ನು ಸದಸ್ಯರನ್ನಾಗಿ ನೇಮಕ ಮಾಡಲು ನಿರ್ಣಯಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2024:ಎಸಿ–2.05:** 2023–24ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 50ರ ಪ್ರಕಾರ ವಿಶ್ವವಿದ್ಯಾಲಯದ 2023–24ನೇ ಸಾಲಿನ ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಯ 36ನೇ ವಾರ್ಷಿಕ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

**2024:ಎಸಿ–2.06:** ಪರಿನಿಯಮಗಳ ಸ್ಥಾಯಿ ಸಮಿತಿಯಿಂದ ಸಿದ್ಧಪಡಿಸಲಾಗಿರುವ ಪರಿನಿಯಮಗಳನ್ನು ಅನುಮೋದನೆಗೆ ಮಂಡಿಸುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಆಡಳಿತ ವಿಭಾಗದ ಕೆಲವು ಶಾಖೆಗಳಿಗೆ ಸಂಬಂಧಿಸಿದಂತೆ ಹಾಗೂ ವಿವಿಧ ಅಧ್ಯಯನ ಕೇಂದ್ರಗಳ ಪರಿನಿಯಮಗಳನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿತ್ತು. ಆದರೆ, ಸದರಿ ಪರಿನಿಯಮಗಳಲ್ಲಿ ಕಂಡುಬಂದ ಆಕ್ಷೇಪಣೆ ಹಾಗೂ ನ್ಯೂನತೆಗಳನ್ನು ಸರಿಪಡಿಸಿ ಪುನ: ಸಕ್ಷಮ ಪ್ರಾಧಿಕಾರಗಳ ಅನುಮೋದನೆಯ ನಂತರ ಮರು ಸಲ್ಲಿಸುವಂತೆ ತಿಳಿಸಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.
ಪ್ರೊ.ವೈ.ಎಲ್.ರಾಮಚಂದ್ರನಾಯಕರವರು ಮಾತನಾಡಿ, ಎಲ್ಲಾ ಸ್ನಾತಕೋತ್ತರ ವಿಭಾಗಗಳಿಗೆ ಒಬ್ಬ ಅಟೆಂಡರ್ ಹುದ್ದೆಯನ್ನು ಮಾತ್ರ ನಮೂದಿಸಿದೆ. ಆದರೆ, ವಿಜ್ಞಾನ ವಿಭಾಗಗಳ ಪ್ರಯೋಗಾಲಯಗಳಿಗೆ ಹೆಚ್ಚಿನ ಅಟೆಂಡರ್‌ಗಳ ಅಗತ್ಯವಿದ್ದು, ಕನಿಷ್ಠ ಮೂವರು ಲ್ಯಾಬ್ ಅಟೆಂಡೆಂಟ್ ಬೇಕಾಗುತ್ತದೆ. ಆದುದರಿಂದ ಮಾನವ ಸಂಪನ್ಮೂಲವನ್ನು ವೈಜ್ಞಾನಿಕವಾಗಿ ನಿಗದಿಪಡಿಸಬೇಕು ಎಂದರು.

**ನಿರ್ಣಯ:** ಚರ್ಚೆಯ ನಂತರ ಪ್ರಯೋಗಾಲಯಗಳಿರುವ ವಿಜ್ಞಾನ ವಿಭಾಗಗಳಿಗೆ ಮಾತ್ರ ಅನ್ವಯಾಗುವಂತೆ ಮೂವರು ಲ್ಯಾಬ್ ಅಟೆಂಡೆಂಟ್ ಹಾಗೂ ಒಬ್ಬ ಅಟೆಂಡರ್ ಒಳಗೊಂಡಂತೆ ತಿದ್ದುಪಡಿಯೊಂದಿಗೆ ಈ ಕೆಳಕಂಡ ಪರಿನಿಯಮಗಳನ್ನು ಅನುಮೋದಿಸಲಾಯಿತು ಹಾಗೂ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು

1) Statutes governing the establishment of Department of Post Graduate Studies and Research in Biochemistry at the University headquarter, Jnanasahyadri, Shankaraghatta and institution of Teaching and Non-Teaching Posts in the Department.

2) Statutes governing the establishment of the Post graduate Department of Studies and Research in Bioinformatics at the University headquarter Jnanasahyadri, Shankaraghatta and institution of teaching and non-teaching posts in the Department.

3) Statutes governing the establishment of the Post graduate Department of Studies and Research in Biotechnology at Kuvempu University, Sahyadri College Campus, Shivamogga, and institution of Teaching and Non-teaching posts in the Department.

4) Statutes governing the establishment of the Post graduate Department of Studies and Research in Business Administration at the University headquarter, Jnansahyadri, Shankaraghatta and institution of Teaching and Non teaching posts in the Department.

5) Statutes governing the establishment of the Post graduate department of studies and research in chemistry at Kuvempu University Post graduate Centre, Kadur and institution of Teaching and Non- teaching posts in the Department.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

6) Statutes governing the establishment of Department of Post graduate Studies and Research in Commerce, at Kuvempu University Post graduate Centre, Kadur, and institution of teaching and non-teaching posts in the Department.

7) Statutes governing the establishment of the Department of Post graduate Studies and Research in Computer Science, at the University headquarter, Jnanasahyadri, Shankaraghatta and institution of teaching and non-teaching posts in the Department.

8) Statutes governing the establishment of Department of Post graduate Studies and Research in Tourism Administration, at the University headquarter, Jnanasahyadri, Shankaraghatta and institution of teaching and non-teaching posts in the department.

9) Statutes governing the establishment of the Post graduate Department of Studies and Research in Physical Education at the University headquarter, Jnanasahyadri, Shankaraghatta and institution of teaching and non teaching posts in the Department.

10) Statutes governing the establishment of the Post graduate Department of Studies and Research in Journalism and Mass Communication at the university headquarter, Jnanasahyadri, Shankaraghatta and institution of teaching and non-teaching posts in the department.

11) Statutes governing the establishment of the Post graduate Department of Studies and Research in Commerce at the University headquarter, Jnanasahyadri, Shankaraghatta and institution of teaching and non-teaching posts in the Department.

12) Statutes governing the establishment of the Post graduate Department of Studies and Research in Master of Business Administration in Human Resource Management at the University headquarter, Jnanasahyadri, Shankaraghatta and institution of teaching and non-teaching posts in the Department.

13) Statutes governing the establishment of the Post graduate Department of Studies and Research in Microbiology at the University headquarter, Jnanasahyadri, Shankaraghatta and institution of teaching and non-teaching posts in the Department.

14) Statutes governing the establishment of the Post graduate Department of Studies and Research in Pharmaceutical Chemistry at the Kuvempu University post graduate centre, Kadur and institution of teaching and non-teaching posts in the department.

15) Statutes governing the establishment of Prasaranga in Kuvempu University and institution of posts in Prasaranga

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

16) Statutes governing the establishment of Post graduate programme in Remote Sensing Applications in the Post graduate Department of Applied Geology at the University headquarter, Jnanasahyadri, Shankaraghatta and institution of teaching and non-teaching posts in the Department

17) Statutes governing the institution of Research fellowships to SC/ST Research fellows in P.G. Departments of Kuvempu University

18) Statutes governing the establishment of the Post graduate Department of Studies and Research in Social Work at the Kuvempu University headquater, Jnanasahyadri, Shankaraghatta and institution of teaching and non-teaching posts at the Department.

19) The Kuvempu University Statute governing the establishment of Centre for Online Education (CoE) under the Directorate of Distance Education.

20) Statutes governing the establishment of the Post- graduate Department of Studies and Research in Wildlife and Management at the University headquarter, Jnanasahyadri, Shankaraghatta and institution of teaching and non-teaching posts in the Department.

**2024:ಎಸಿ–2.06(A):** ನ್ಯಾಕ್ ಎಸ್.ಎಸ್.ಆರ್. ವರದಿಗೆ ಅವಶ್ಯಕವಾಗಿ ಅಪ್‌ಲೋಡ್ ಮಾಡಬೇಕಾಗಿರುವ ಈ ಕೆಳಕಂಡ 08 ಕರಡು ಪಾಲಿಸಿಗಳನ್ನು ಅನುಮೋದಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯವು ನ್ಯಾಕ್ ಮರು ಮಾನ್ಯತೆಗೆ ಒಳಪಡುತ್ತಿರುವ ಹಿನ್ನೆಲೆಯಲ್ಲಿ, ನ್ಯಾಕ್‌ಗೆ ಸಲ್ಲಿಸಬೇಕಾಗಿರುವ Self Study Reportಗೆ ಅಪ್‌ಲೋಡ್ ಮಾಡಲು ಅಗತ್ಯವಿರುವ ಈ ಕೆಳಕಂಡ ಪಾಲಿಸಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

1. Guidelines of Professional Code of Conduct for Employees
2. Green Policy Document
3. Research Ethics Policy
4. Seed Grant Policy
5. Collaboration Policy
6. Information Communication Technology (ICT) Policy
7. Consultancy Policy
8. Intellectual Property – IP Policy

**ಶೈಕ್ಷಣಿಕ ವಿಭಾಗ**

**2024:ಎಸಿ–2.07:** "Suresh N.P. Shivamogga Gold medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಶ್ರೀಮತಿ ಅಂಬಿಕ ಎನ್.ಪಿ., ಶಿವಾಂಬಿಕ, 2ನೇ ಮುಖ್ಯ ರಸ್ತೆ, 6ನೇ ತಿರುವು, ಕೃಷಿನಗರ, ಶಿವಮೊಗ್ಗ ಇವರು ಕುವೆಂಪು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸ್ನಾತಕ ಬಿ.ಎ. (ಇತಿಹಾಸ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ) ಕಲಾ ಪದವಿ (ರೆಗ್ಯುಲರ್) ಅಧ್ಯಯನದಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ "Suresh, N.P., Shivamogga Memorial Gold Medal" ಹೆಸರಿನಲ್ಲಿ ವಿಶ್ವವಿದ್ಯಾಲಯದ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**2024:ಎಸಿ–2.08:** "Prof. Balabhim Shankarappa Biradar Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಪ್ರೊ.ಬಿ.ಎಸ್.ಬಿರಾದಾರ್‌ರವರ ಸಂಶೋಧನಾ ವಿದ್ಯಾರ್ಥಿಗಳು ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಷಯದಲ್ಲಿ (M.L.I.Sc.) ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Prof. Balabhim Shankarappa Biradar Gold Medal" ಹೆಸರಿನಲ್ಲಿ ವಿಶ್ವವಿದ್ಯಾಲಯದ 34ನೇ ಘಟಿಕೋತ್ಸವದಿಂದ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

**2024:ಎಸಿ–2.09:** ವಿಶ್ವವಿದ್ಯಾಲಯದ 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

**ಚರ್ಚೆ:** ದಿನಾಂಕ:15–07–2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಪರಿಚಲಿಸಲಾಗಿರುವ 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಯಿತು. ಡಾ. ಅನಂತ ಎಸ್. ರವರು ಮಾತನಾಡಿ ಈ ವೇಳಾಪಟ್ಟಿಯನ್ನು ಯಥಾವತ್ತಾಗಿ ಅಳವಡಿಸಿದಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುತ್ತದೆ. ಮುಂದಿನ ದಿನಗಳಲ್ಲಿ ಇದನ್ನು ಮತ್ತೆ ಪರಿಷ್ಕರಿಸಬಾರದು. ಕೆಲವು ವಿಷಯಗಳಲ್ಲಿ ಅತಿಥಿ ಉಪನ್ಯಾಸಕರನ್ನು ಮೌಲ್ಯಮಾಪನ ಕಾರ್ಯದಿಂದ ಬೇಗನೆ ಬಿಡುಗಡೆಗೊಳಿಸಿ, ಹಿರಿಯ ಖಾಯಂ ಅಧ್ಯಾಪಕರು ಮೌಲ್ಯಮಾಪನ ಮಾಡುತ್ತಾರೆ. ಇದರಿಂದ ಮೌಲ್ಯಮಾಪನ ವಿಳಂಬವಾಗುತ್ತದೆ ಹಾಗೂ ಕಾಲೇಜಿನ ಪಾಠಪ್ರವಚನಗಳಿಗೆ ತೊಂದರೆಯಾಗುತ್ತದೆ. ಆದುದರಿಂದ, ಮೌಲ್ಯಮಾಪನ ಮುಗಿರುವವರೆಗೂ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಬೇಕು ಎಂದರು. ಶ್ರೀ ಲಕ್ಷ್ಮೀಶ, ಎ.ಎಸ್.ರವರು ಮಾತನಾಡಿ, ಚಿಕ್ಕಮಗಳೂರಿನಲ್ಲಿ ಕೂಡ ಮೌಲ್ಯಮಾಪನ ಕೇಂದ್ರ ಆರಂಭಿಸಿ. ಇದರಿಂದ ಅಲ್ಲಿನ ಅಧ್ಯಾಪಕರು ಶಿವಮೊಗ್ಗಕ್ಕೆ ಬರುವುದು ತಪ್ಪುತ್ತದೆ ಹಾಗೂ ಮೌಲ್ಯಮಾಪನ ಕಾರ್ಯ ಕೂಡ ಬೇಗನೆ ಮುಗಿಯುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಮೌಲ್ಯಮಾಪನ ಮುಗಿದ ತಕ್ಷಣ ಅಂಕಗಳನ್ನು ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಕೋಡಿಂಗ್ ಮತ್ತು ಡೀಕೋಡಿಂಗ್ ತಾಂತ್ರಿಕ ಸಮಸ್ಯೆ ಇರುವುದರಿಂದ ಚಿಕ್ಕಮಗಳೂರಿನ ಬದಲು ಶಿವಮೊಗ್ಗದಲ್ಲಿಯೇ ಮೂರು ಮೌಲ್ಯಮಾಪನ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್‌ನಲ್ಲಿ ಹಲವಾರು ತಾಂತ್ರಿಕ ಸಮಸ್ಯೆಗಳು ಇರುವುದರಿಂದ ಶಿವಮೊಗ್ಗ ಹೊರತುಪಡಿಸಿ ಬೇರೆಡೆಗಳಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ಸ್ಥಾಪಿಸಲು ಕಷ್ಟವಾಗುತ್ತಿದೆ. ಆದಾಗ್ಯೂ ಈ ಕುರಿತಾಗಿ ಸಾಧ್ಯತೆಗಳನ್ನು ಪರಿಶೀಲಿಸಿ ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಮಿತಿ ಸಭೆಯ ಅನುಮೋದನೆ ಪಡೆದುಕೊಂಡು ಪರಿಚಲಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2024:ಎಸಿ–2.10:** ಪಿಹೆಚ್.ಡಿ ಪರಿಷ್ಕೃತ ವಿನಿಯಮ–2024ನ್ನು ಅಳವಡಿಸಿಕೊಳ್ಳುವ ಬಗ್ಗೆ.

**ಚರ್ಚೆ:** ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಜಾರಿಗೆ ತಂದಿರುವ U.G.C. (Minimum Standards and procedure for the Award of Ph.D.) Regulation-2022 ನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಳವಡಿಸಲು ಅನುಮೋದನೆಗಾಗಿ ಸಭೆಗೆ ಮಂಡಿಸಲಾಯಿತು. ಗ್ರಂಥಪಾಲಕರಾದ ಡಾ.ಆರ್.ಹೆಚ್.ವಾಲ್ಮೀಕಿ ರವರು ಮಾತನಾಡಿ, ಕ್ರಮ ಸಂಖ್ಯೆ:20.8ರ ಕೊನೆಯ ಸಾಲಿನಲ್ಲಿ as recommended by the library ಎಂಬುದು as recommended by the U.G.C. ಎಂದು ಆಗಬೇಕು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಜಾರಿಗೆ ತಂದಿರುವ U.G.C. (Minimum Standards and procedure for the Award of Ph.D.) Regulation-2022ನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ತಿದ್ದುಪಡಿಗಳೊಂದಿಗೆ ಕರಡು ಪ್ರತಿಯನ್ನು ಅನುಮೋದಿಸಿದ ಸಭೆಯು ಘನತೆವೆತ್ತ ಕುಲಾಧಿಪತಿಯವರ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಿತು.

**2024:ಎಸಿ-2.10(A):** ಕಾಲೇಜುಗಳಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸುವ ಕುರಿತು ಪರಿನಿಯಮಕ್ಕೆ ಸೇರ್ಪಡೆ ಹಾಗೂ ಪರಿಷ್ಕರಣೆ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ದಿನಾಂಕ:15-07-2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆ ಮತ್ತು ದಿನಾಂಕ:19-07-2024ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಸಂಶೋಧನಾ ಕೇಂದ್ರ ಸ್ಥಾಪನೆ ಹಾಗೂ ಕಾಲೇಜುಗಳಲ್ಲಿರುವ ಅರ್ಹ ಅಧ್ಯಾಪಕರಿಗೆ ಸಂಶೋಧನಾ ಮಾರ್ಗದರ್ಶಕರೆಂದು ಮಾನ್ಯತೆ ನೀಡುವ ಬಗ್ಗೆ ಚರ್ಚಿಸಿದ ಪ್ರಕಾರ ಯು.ಜಿ.ಸಿ. ನಿಯಮದಂತೆ ಮಾರ್ಗಸೂಚಿ ಸಿದ್ಧಪಡಿಸಲು ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಸಿದ್ಧಪಡಿಸಿರುವ Amendment/Addition to the Kuvempu University Regulations governing the granting of recognition for college as a research center and to offer Ph. D. Programme ನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು. ಡಾ. ಅನಂತ ಎಸ್. ರವರು ಮಾತನಾಡಿ ನ್ಯಾಕ್ ಪೀರ್ ಸಮಿತಿಯು ಭೇಟಿ ನೀಡಿದಾಗ ಕಾಲೇಜಿನಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳಿದ್ದು, ಸಂಶೋಧನಾ ಕೇಂದ್ರ ಮತ್ತು ಸಂಶೋಧನಾ ಸೌಲಭ್ಯಗಳಿಲ್ಲ. ಆದುದರಿಂದ, ಸಂಶೋಧನಾ ಕೇಂದ್ರ ಸ್ಥಾಪನೆ ಮಾಡಲು ಪ್ರಯತ್ನಿಸುವಂತೆ ಸೂಚಿಸಿದ್ದಾರೆ ಎಂದರು. ಪ್ರೊ.ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಸರ್ಕಾರಿ ಕಾಲೇಜುಗಳ ಅಧ್ಯಾಪಕರು ಆಗಾಗ್ಗೆ ವರ್ಗಾವಣೆ ಹೊಂದುತ್ತಾರೆ. ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶಕರು ವರ್ಗಾವಣೆಗೊಂಡಲ್ಲಿ ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾರ್ಥಿಗಳಿಗೆ ಸಮಸ್ಯೆಯಾಗುತ್ತದೆ ಎಂದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ ವಿಶ್ವವಿದ್ಯಾಲಯದ ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನೇ ಕೇಂದ್ರವಾಗಿಸಿಕೊಂಡು ಸಂಯೋಜಿತ ಕಾಲೇಜುಗಳ ಅಧ್ಯಾಪಕರಿಗೆ ಗೈಡ್‌ಶಿಪ್ ನೀಡಿದರೆ ಒಳಿತಾಗುತ್ತದೆ ಎಂದರು. ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ.ವಿಷ್ಣುಮೂರ್ತಿರವರು ಮಾತನಾಡಿ, ಕಾಲೇಜುಗಳ ಅಧ್ಯಾಪಕರು ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಸಹಯೋಗದೊಂದಿಗೆ Collaborative Research ಮಾಡಲು ಅವಕಾಶ ನೀಡಬಹುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಕಾಲೇಜಿನ ಒಬ್ಬ ಪ್ರಾಧ್ಯಾಪಕರು Collaborative Research ಮಾಡಲು ಅವಕಾಶವಿದೆ. ಆದರೆ ವಿಶ್ವವಿದ್ಯಾಲಯದ ಸಂಶೋಧನೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಅಧ್ಯಾಪಕರುಗಳಿಗೆ ಮಂಜೂರಾಗಿರುವ ಪ್ರಾಜೆಕ್ಟ್ ಅನುದಾನ ಉಪಯೋಗಿಸಿಕೊಂಡು ನಡೆಸುತ್ತಾರೆ. ಅದನ್ನು ಬೇರೆಯವರು ಬಳಸಲು ಅವಕಾಶ ನೀಡುವುದು ಕಷ್ಟವಾಗುತ್ತದೆ. ಅಲ್ಲದೇ ಸಂಶೋಧನಾ ಪ್ರಯೋಗಾಲಯಕ್ಕೆ ಬಳಸುವ ಕೆಲವು ಕೆಮಿಕಲ್ಸ್‌ಗಳು ಹಾಗೂ ಪ್ರಯೋಗಾಲಯ ಉಪಕರಣಗಳ ದರಗಳು ಬಹಳ ದುಬಾರಿಯಾಗಿದ್ದು, ಅವುಗಳ ಬೆಲೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ಅನ್ಯರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದರು. ಡಾ. ಅನಂತ್ ರವರು ಮಾತನಾಡಿ, ಸಮಾಜವಿಜ್ಞಾನ ವಿಷಯಗಳಲ್ಲಿ ಪ್ರಯೋಗಾಲಯದ ಅಗತ್ಯವಿರುವುದಿಲ್ಲ. ಅವರು ಆನ್‌ಲೈನ್‌ನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಕೂಡ ಬಳಸಿಕೊಂಡು ಮಾರ್ಗದರ್ಶನ ನೀಡಬಹುದು ಎಂದರು. ಡಾ. ಮಧು ರವರು ಮಾತನಾಡಿ ಅಗತ್ಯ ಮೂಲಭೂತ ಸೌಲಭ್ಯ ಇರುವ ಕಾಲೇಜುಗಳಿಗೆ ಸಂಶೋಧನಾ ಕೇಂದ್ರ ನೀಡಬಹುದು ಎಂದರು. ಡಾ.ಜಿ. ಪ್ರಶಾಂತನಾಯಕ್ ರವರು ಮಾತನಾಡಿ, ವಿಜ್ಞಾನ ವಿಷಯಗಳನ್ನು ಹೊರತುಪಡಿಸಿ, ಮೂಲಭೂತ ಸೌಲಭ್ಯ ಇರುವ ಕಾಲೇಜುಗಳಿಗೆ ಸಮಾಜವಿಜ್ಞಾನ ಮತ್ತು ವಾಣಿಜ್ಯ ವಿಷಯಗಳಿಗೆ ಸಂಶೋಧನಾ ಕೇಂದ್ರ ನೀಡಬಹುದು ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿ ರವರು ಮಾತನಾಡಿ, ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡುವಾಗ ಯು.ಜಿ.ಸಿ. ನಿಯಮಗಳನ್ನು ಪಾಲಿಸಬೇಕು. ಕಾಲೇಜಿನಲ್ಲಿ ಸಂಬಂಧಪಟ್ಟ ವಿಷಯದ ಸ್ನಾತಕೋತ್ತರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಕೋರ್ಸ್‌ನ್ನು ಬೋಧಿಸುತ್ತಿರಬೇಕು ಎಂದಿದೆ. ಆದುದರಿಂದ, ಕಾಲೇಜಿನವರು ಈ ಬಗ್ಗೆ ಅಗತ್ಯ Input and Structure ಸಿದ್ಧಪಡಿಸಿ ನೀಡಿದಲ್ಲಿ ಪರಿಶೀಲಿಸಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಡಾ.ಅನಂತ ಎಸ್. ರವರು ಮಾತನಾಡಿ, Amendment/ Addition to the Kuvempu University Regulations governing the granting of recognition for college as a research center and to offer Ph.D. Programme ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಯಾದ ನಂತರ ಸಂಯೋಜಿತ ಕಾಲೇಜುಗಳಿಗೆ ಕಳುಹಿಸಿದಲ್ಲಿ ಸಂಶೋಧನಾ ಕೇಂದ್ರ ಪಡೆಯಲು ಅನುಕೂಲವಾಗುತ್ತದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ Amendment/Addition to the Kuvempu University Regulations governing the granting of recognition for college as a research center and to offer Ph. D. Programme ನ್ನು ಸಭೆಯು ಅನುಮೋದಿಸಿತು.

**2024:ಎಸಿ–2.11:** 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕುರಿತು.

**ನಿರ್ಣಯ:** ಚರ್ಚೆಯ ನಂತರ 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳ ಪರಿಷ್ಕರಣೆ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸ್ಥಿರೀಕರಿಸಿ ಅನುಮೋದಿಸಿದ ಸಭೆಯು, ಬಿ.ಪಿ.ಇಡಿ. ಹಾಗೂ ಬಿ.ಇಡಿ. ಕೋರ್ಸ್‌ಗಳಿಗೆ ರೆಡ್‌ಕ್ರಾಸ್ ಶುಲ್ಕವನ್ನು ಸೇರ್ಪಡೆಗೊಳಿಸುವಂತೆ ಸರ್ವಾನುಮತದಿಂದ ನಿರ್ಣಯಿಸಿತು.

**2024:ಎಸಿ–2.12:** 2024–25ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, 2024–25ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕಗಳ ಪರಿಷ್ಕರಣೆ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

## ಪರೀಕ್ಷಾ ವಿಭಾಗ

**2024:ಎಸಿ–2.13:** ದ್ವಿಗುಣ ಅವಧಿ ಪೂರ್ಣಗೊಳಿಸಿದ (DOUBLE THE DURATION) ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸೆಮಿಸ್ಟರ್ ಪದವಿಯ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ನಿಗದಿತ ಆರು ವರ್ಷಗಳ ಅವಧಿಯೊಳಗೆ ಪದವಿ ಪೂರ್ಣಗೊಳಿಸಲಾಗದ, ದ್ವಿಗುಣ ಅವಧಿ ಮುಗಿದಿರುವ ಕೆಲವು ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮನವಿ ಸಲ್ಲಿಸಿ, ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವುದರಿಂದ ತಮ್ಮ ಉನ್ನತ ಶಿಕ್ಷಣ, ಉದ್ಯೋಗ, ಬಡ್ತಿ ಮುಂತಾದ ಅವಕಾಶಗಳಿಂದ ವಂಚಿತರಾಗಿದ್ದು, ಪರೀಕ್ಷೆ ಬರೆಯಲು ಇನ್ನೊಂದು ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದಾರೆ. ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದ ಜೊತೆಗೆ ರೂ.3000/–(ರೂಪಾಯಿ ಮೂರು ಸಾವಿರ ಮಾತ್ರ) ಗಳ ವಿಶೇಷ ಶುಲ್ಕದೊಂದಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವ ಕುರಿತು ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಡಾ.ಅನಂತ ಎಸ್. ರವರು ಮಾತನಾಡಿ, ಯಾವ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆ ನೀಡಬೇಕು ಮತ್ತು ಅವರು ಯಾವ ಪಠ್ಯಕ್ರಮ ಅಧ್ಯಯನ ಮಾಡಿ ಪರೀಕ್ಷೆ ಬರೆಯಬೇಕು ಎಂಬುದರ ಬಗ್ಗೆ ಮಾನದಂಡ ನಿಗದಿ ಮಾಡಬೇಕು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡುತ್ತಿದ್ದು, ಹಿಂದಿನ ಎಲ್ಲಾ ವಿದ್ಯಾರ್ಥಿಗಳು ಎನ್.ಇ.ಪಿ. ಆರಂಭವಾಗುವ ಮುಂಚೆ ಚಾಲ್ತಿಯಲ್ಲಿದ್ದ ಪಠ್ಯಕ್ರಮದಲ್ಲಿ ಮಾತ್ರ ಪರೀಕ್ಷೆ ಬರೆಯಬೇಕಾಗುತ್ತದೆ ಎಂದರು. ಪ್ರೊ. ಆರ್. ಹಿರೇಮಣಿನಾಯ್ಕ ರವರು ಮಾತನಾಡಿ, ದ್ವಿಗುಣ ಅವಧಿ ಮುಗಿದಿರುವ ದೂರಶಿಕ್ಷಣದ ಕೆಲವು ವಿದ್ಯಾರ್ಥಿಗಳು ಕೂಡ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಮನವಿ ಮಾಡಿದ್ದು,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ,
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಪರಿಗಣಿಸುವಂತೆ ಕೋರಿದರು. ಡಾ. ಮಧು ರವರು ಮಾತನಾಡಿ, ಆಂತರಿಕ ಅಂಕಗಳು 80:20, 75:25, 70:30 ಹೀಗೆ ವಿಭಿನ್ನವಾಗಿದ್ದು ಯಾವುದನ್ನು ಪರಿಗಣಿಸಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, 70:30 ನ್ನು ಮಾನದಂಡವಾಗಿ ಇಟ್ಟುಕೊಂಡು, ಹಿಂದಿನ ಆಂತರಿಕ ಅಂಕಗಳನ್ನು 30ಕ್ಕೆ ಶೇಕಡವಾರು ಮಾರ್ಪಾಡು ಮಾಡಿಕೊಂಡು ಪರಿಗಣಿಸಲಾಗುವುದು ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ದ್ವಿಗುಣ ಅವಧಿ ಮುಗಿದಿರುವ ರೆಗ್ಯುಲರ್‌ನ ಸೆಮಿಸ್ಟರ್ ಸ್ಕೀಂನಲ್ಲಿ ಅಧ್ಯಯನ ಮಾಡಿರುವ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ದೂರಶಿಕ್ಷಣದ ಎಲ್ಲಾ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದೊಂದಿಗೆ ರೂ.3000/- (ರೂಪಾಯಿ ಮೂರು ಸಾವಿರ ಮಾತ್ರ) ಗಳ ವಿಶೇಷ ಶುಲ್ಕದೊಂದಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲು ಅನುಮತಿಸಿದ ಸಭೆಯು, ರೆಗ್ಯುಲರ್ ವಿದ್ಯಾರ್ಥಿಗಳಿಗೆ ಶಿವಮೊಗ್ಗ ಮತ್ತು ಚಿಕ್ಕಮಗಳೂರಿನ ಜಿಲ್ಲಾ ಕೇಂದ್ರದಲ್ಲಿ ಮಾತ್ರ ಪರೀಕ್ಷಾ ಕೇಂದ್ರ ಸ್ಥಾಪಿಸಬೇಕು. ಅವರು ಎನ್.ಇ.ಪಿ., ಆರಂಭವಾಗುವ ಮುಂಚೆ ಚಾಲ್ತಿಯಲ್ಲಿದ್ದ ಪಠ್ಯಕ್ರಮದಲ್ಲಿಯೇ ಪರೀಕ್ಷೆ ಬರೆಯಲು ಅವಕಾಶ ನೀಡಲು ಮತ್ತು ಥಿಯರಿ ಮತ್ತು ಆಂತರಿಕ ಅಂಕಗಳಿಗೆ ಸಂಬಂಧಪಟ್ಟಂತೆ 70:30 ನ್ನು ಮಾನದಂಡವಾಗಿ ಇಟ್ಟುಕೊಂಡು, ಹಿಂದಿನ ಆಂತರಿಕ ಅಂಕಗಳನ್ನು 30ಕ್ಕೆ ಅನ್ವಯವಾಗುವಂತೆ ಶೇಕಡವಾರು ಮಾರ್ಪಾಡು ಮಾಡಿಕೊಂಡು ಪರಿಗಣಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2024:ಎಸಿ-2.14:** ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ನೇಮಕಾತಿ/ನವೀಕರಣಕ್ಕೆ ಸಂಬಂಧಿಸಿದಂತೆ ಶುಲ್ಕ ಪಾವತಿ ಕುರಿತು.

**ನಿರ್ಣಯ:** ಚರ್ಚೆಯ ನಂತರ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ಹೊಸ ನೇಮಕಾತಿಗಳ ಅನುಮೋದನೆಗೆ ಶುಲ್ಕ ಪಡೆಯಬೇಕು. ಆದರೆ ನೇಮಕಾತಿ ನವೀಕರಣಕ್ಕೆ ಶುಲ್ಕ ಪಡೆಯುವ ಅಗತ್ಯವಿಲ್ಲ ಎಂದು ನಿರ್ಣಯಿಸಲಾಯಿತು.

**2024:ಎಸಿ-2.15:** ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ನಡಾವಳಿ ಮತ್ತು ಸಂಯೋಜನೆ -ಶುಲ್ಕಗಳ ಪರಿಷ್ಕರಣ ಪಟ್ಟಿಯ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ, ದಿನಾಂಕ:30-12-2023 ರಂದು ನಡೆದ ಕಾಲೇಜು ಅಭಿವೃದ್ಧಿ ಪರಿಷತ್ತಿನ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಹಾಗೂ 2024-25ನೇ ಸಾಲಿನ ಸಂಯೋಜನಾ ಶುಲ್ಕಗಳನ್ನು ಶೇ.10 ರಷ್ಟು ಹೆಚ್ಚಿಸಿ ಪರಿಷ್ಕರಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**2024:ಎಸಿ-2.16:** ಚಿಕ್ಕಮಗಳೂರು ಜಿಲ್ಲೆಯ 02 ಪದವಿ ಕಾಲೇಜುಗಳನ್ನು ಶಾಶ್ವತವಾಗಿ ಮುಚ್ಚುವಂತೆ ಕೋರಿರುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ವಿದ್ಯಾರ್ಥಿಗಳ ಕೊರತೆ ಮತ್ತು ಇನ್ನಿತರ ಕಾರಣಗಳಿಂದಾಗಿ ಶ್ರೀ ಕಲ್ಲೇಶ್ವರ ಸ್ವಾಮಿ ಪ್ರಥಮ ದರ್ಜೆ ಕಾಲೇಜು, ಸಿಂಗಟಗೆರೆ, ಕಡೂರು ತಾಲ್ಲೂಕು ಹಾಗೂ ಬಾಳೆಹೊನ್ನೂರು ಎಜುಕೇಷನ್ ಸೊಸೈಟಿ ಪ್ರಥಮ ದರ್ಜೆ ಕಾಲೇಜು, ಬಾಳೆಹೊನ್ನೂರು, ನರಸಿಂಹರಾಜಪುರ ತಾಲ್ಲೂಕು – ಇವುಗಳನ್ನು ಮುಚ್ಚಲು ಸಭೆಯು ಅನುಮತಿಸಿತು.

**2024:ಎಸಿ-2.17:** 2023-24ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸ್/ ವಿಷಯಗಳಿಗೆ ನವೀನ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಕರ್ನಾಟಕ ಸರ್ಕಾರವು 2023-24ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸ್/ವಿಷಯಗಳನ್ನು ಆರಂಭಿಸಲು ಅನುಮತಿ ನೀಡಿದ್ದ ಹಿನ್ನೆಲೆಯಲ್ಲಿ, ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಕಾಲೇಜುಗಳಿಗೆ ಸಂಯೋಜನೆ ನೀಡಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

2024:ಎಸಿ-2.17(A): ವಿಶ್ವವಿದ್ಯಾಲಯದ Vision Document 2024-28ನ್ನು ಅವಗಾಹನೆಗಾಗಿ ಮಂಡಿಸುತ್ತಿರುವ ಕುರಿತು.

ನಿರ್ಣಯ: ಮಾನ್ಯ ಕುಲಪತಿಯವರು ಮಾತನಾಡಿ, ವಿವಿಧ ಸಭೆಗಳಲ್ಲಿ ಬಂದ ಸಲಹೆ ಮತ್ತು ಸೂಚನೆಗಳನ್ನು ಪರಿಶೀಲಿಸಿ, ಅಳವಡಿಸಿಕೊಂಡು ಕುವೆಂಪು ವಿಶ್ವವಿದ್ಯಾಲಯದ 2024 ರಿಂದ 2028 ರವರೆಗೆ ನಾಲ್ಕು ವರ್ಷಗಳಲ್ಲಿ ಕೈಗೊಳ್ಳಬೇಕಾದ ಶೈಕ್ಷಣಿಕ, ಸಂಶೋಧನಾ ಮತ್ತು ಇತರೆ ಅಭಿವೃದ್ಧಿ ಕಾರ್ಯಚಟುವಟಿಕೆಗಳ ರೂಪುರೇಷೆಗಳನ್ನು ಒಳಗೊಂಡ Vision Document 2024-28ನ್ನು ಸಿದ್ಧಪಡಿಸಲಾಗಿದೆ ಎಂದರು. ಶ್ರೀ ಡಿ.ಎಸ್.ಅರುಣ್ ರವರು ಮಾತನಾಡಿ, ಶಿವಮೊಗ್ಗದ ಛೇಂಬರ್ ಆಫ್ ಕಾಮರ್ಸ್‌ನಲ್ಲಿ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ ಇದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯದವರು ಅಲ್ಲಿಗೆ ಭೇಟಿ ನೀಡಿ, ಮಾಹಿತಿ ಪಡೆಯಬೇಕು. ವಿದ್ಯಾರ್ಥಿಗಳಿಗೆ ಸಾಫ್ಟ್ ಸ್ಕಿಲ್ಸ್ ಅಗತ್ಯವಿದೆ. ಮಕ್ಕಳು ಸಾಫ್ಟ್ ಸ್ಕಿಲ್ಸ್‌ನಲ್ಲಿ ಬಹಳ ಹಿಂದಿದ್ದಾರೆ. ಎಲ್ಲದಕ್ಕೂ ಗೂಗಲ್‌ನ್ನು ಅವಲಂಬಿಸಿದ್ದಾರೆ. ಇದು ಸರಿಯಲ್ಲ, ಆದುದರಿಂದ ಸಾಫ್ಟ್ ಸ್ಕಿಲ್ಸ್ ತರಬೇತಿ ನೀಡುವ ಬಗ್ಗೆ ಕ್ರಮ ವಹಿಸಬೇಕೆಂದರು.

2024:ಎಸಿ-2.18: **ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

1) ಡಾ. ಮಧು.ಜಿ.

2024:ಎಸಿ-2.18(1.1) ವಿಶ್ವವಿದ್ಯಾಲಯವು ಪ್ರತಿವರ್ಷ ಪದವಿ ಕಾಲೇಜು ವಿದ್ಯಾರ್ಥಿಗಳ ದಾಖಲಾತಿ ಅನುಮೋದನೆಯ ಸಮಯದಲ್ಲಿ ಸಂಗ್ರಹಿಸಲಾಗಿರುವ Sports, Extra Curricular Activity, Literacy, Carrier Guidance & Counseling and Poor Student Funds ಶುಲ್ಕದ ಕಳೆದ 5 ಶೈಕ್ಷಣಿಕ ವರ್ಷಗಳ ಸಂಗ್ರಹದ ವಿವರ ಹಾಗೂ ಅದರ ವಿನಿಯೋಗದ ಮಾಹಿತಿ ಹಾಗೂ ಚರ್ಚೆ.

ಡಾ.ಜಿ. ಮಧು ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡಿರುವ ಕೆಲವು ಶೀರ್ಷಿಕೆಗಳಲ್ಲಿ ಯಾವುದೇ ವೆಚ್ಚವಾಗಿಲ್ಲ. ಪ್ರತಿ ವರ್ಷ ಬಿ.ಇಡಿ. ವಿದ್ಯಾರ್ಥಿಗಳು ಕ್ರೀಡಾ ಮತ್ತು ಇ.ಸಿ.ಎ. ಶುಲ್ಕ ಪಾವತಿಸುತ್ತಿದ್ದಾರೆ. ಆದರೆ, ಕಳೆದ 05 ವರ್ಷಗಳಿಂದ ಅವರಿಗೆ ವಿಶ್ವವಿದ್ಯಾಲಯವು ಯಾವುದೇ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿಲ್ಲ. ಇದರಿಂದ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುತ್ತಿದ್ದಾರೆ. ಸಂಗ್ರಹವಾಗುವ ಶುಲ್ಕ ವಿದ್ಯಾರ್ಥಿಗಳಿಗಾಗಿ ವೆಚ್ಚವಾಗುತ್ತಿಲ್ಲ. ಈಗಿನ ಬಿ.ಇಡಿ. ಬ್ಯಾಚ್‌ನವರು ಪದವಿ ಮುಗಿಸಿ ತೆರಳುವುದರೊಳಗೆ ಏನಾದರೂ ಚಟುವಟಿಕೆಗಳನ್ನು ನಡೆಸಿದರೆ ಅನುಕೂಲವಾಗುತ್ತದೆ ಎಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಆಯವ್ಯಯ ಸಿದ್ಧಪಡಿಸುವಾಗ ನಿರೀಕ್ಷಿತ ಆದಾಯವನ್ನು ಅಂದಾಜಿಸಿಕೊಂಡು ಅನುದಾನವನ್ನು ವಿವಿಧ ಶೀರ್ಷಿಕೆಗಳಿಗೆ ಹಂಚಿಕೆ ಮಾಡಲಾಗುತ್ತದೆ. ಆದರೆ, ಆಯವ್ಯಯದ ಪ್ರಕಾರ ನಿರೀಕ್ಷಿತ ಅನುದಾನ ಸಂಗ್ರಹವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಆಯವ್ಯಯ ಸಿದ್ಧಪಡಿಸುವಾಗ ಕೆಲವು ಶೀರ್ಷಿಕೆಗಳ ಬಗ್ಗೆ ಪರಿಶೀಲಿಸಿ, ಕೆಲವು ವೆಚ್ಚಗಳನ್ನು ಸಂಬಂಧಪಟ್ಟ ಶೀರ್ಷಿಕೆಗಳಿಂದ ಭರಿಸುವ ಬಗ್ಗೆ ಕ್ರಮ ವಹಿಸಲಾಗುವುದು ಎಂದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎನ್.ಡಿ.ವಿರೂಪಾಕ್ಷರವರು ಮಾತನಾಡಿ, ಕೋವಿಡ್-19ರ ಕಾರಣದಿಂದ ಕೆಲವು ವರ್ಷ ಕ್ರೀಡಾ ಕಾರ್ಯಕ್ರಮಗಳು ನಡೆಯಲಿಲ್ಲ. ಆಯವ್ಯಯದಲ್ಲಿ ಬಿ.ಇಡಿ. ವಿದ್ಯಾರ್ಥಿಗಳ ಕ್ರೀಡಾಕೂಟಕ್ಕಾಗಿ ಪ್ರತ್ಯೇಕ ಅನುದಾನ ಒದಗಿಸಿಲ್ಲ. ಮುಂದೆ ಅನುದಾನವನ್ನು ಮರುಹಂಚಿಕೆ ಮಾಡಿಕೊಂಡು ಕಾರ್ಯಕ್ರಮ ನಡೆಸಲು ಅನುದಾನ ಒದಗಿಸಲಾಗುವುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಶೀಘ್ರದಲ್ಲಿಯೇ ಶಿಕ್ಷಣ ನಿಕಾಯದ ಡೀನರ ನೇತೃತ್ವದಲ್ಲಿ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಸಭೆ ನಡೆಸಿ ಕ್ರೀಡಾಕೂಟ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರಾದ ಡಾ.ಜಿ.ಪ್ರಶಾಂತನಾಯಕ ರವರು ಮಾತನಾಡಿ, ಅಂತರ ವಿಶ್ವವಿದ್ಯಾಲಯ ಸಾಂಸ್ಕೃತಿಕ ಸ್ಪರ್ಧೆಗಳ ದಿನಾಂಕವನ್ನು ನೋಡಿಕೊಂಡು ಮುಂದಿನ ನವೆಂಬರ್/ಡಿಸೆಂಬರ್ ಮಾಹೆಯಲ್ಲಿ ಸಹ್ಯಾದ್ರಿ ಉತ್ಸವ ನಡೆಸಲು ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಲ್ಲಿ ಸ್ವಲ್ಪಮಟ್ಟಿನ ಹಣವನ್ನು ವಿದ್ಯಾರ್ಥಿಗಳ ಚಟುವಟಿಕೆಗಳಿಗಾಗಿ ವೆಚ್ಚವಾಗಬೇಕು. ಹೆಚ್ಚಿನ ಬೇಡಿಕೆ ಇರುವ ಶೀರ್ಷಿಕೆಗಳನ್ನು ಇಟ್ಟುಕೊಂಡು, ವೆಚ್ಚವಾಗದಿರುವ ಶೀರ್ಷಿಕೆಗಳಿಂದ re-appropriation ಮಾಡಿಕೊಳ್ಳಬಹುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

2024:ಎಸಿ–2.18(1.2) ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಹಿಂದಿನ ಕಲಿಕೆಯ ಕ್ರೆಡಿಟ್‌ಗಳನ್ನು ಸಂಗ್ರಹಿಸುವುದು ABC (Academic Bank of Credit) ಕಡ್ಡಾಯವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕುವೆಂಪು ವಿಶ್ವವಿದ್ಯಾಲಯದ ಪ್ರಸ್ತುತ ಬಿ.ಇಡಿ. ಪದವಿಯ ಪಠ್ಯಕ್ರಮಕ್ಕೆ CBCS ಅಳವಡಿಸಿಕೊಳ್ಳದೆ ಇರುವುದಕ್ಕೆ ಕಾರಣ ಹಾಗೂ ಇದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ಮತ್ತು ನಿರ್ಣಯ ಕೋರಿ.

ಡಾ. ಜಿ. ಮಧು ರವರು ಮಾತನಾಡಿ, ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಹಿಂದಿನ ಕಲಿಕೆಯ ಕ್ರೆಡಿಟ್‌ಗಳನ್ನು ಸಂಗ್ರಹಿಸುವುದು ABC (Academic Bank of Credit) ಕಡ್ಡಾಯವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕುವೆಂಪು ವಿಶ್ವವಿದ್ಯಾಲಯದ ಪ್ರಸ್ತುತ ಬಿ.ಇಡಿ. ಪದವಿಯ ಪಠ್ಯಕ್ರಮಕ್ಕೆ CBCS ಅಳವಡಿಸಿಕೊಳ್ಳದೆ ಇರುವುದರಿಂದ ಬಿ.ಇಡಿ. ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ರಾಜ್ಯದ ಬಹುತೇಕ ಎಲ್ಲಾ ವಿಶ್ವದ್ಯಾಲಯಗಳಲ್ಲಿ CBCS ಅಳವಡಿಸಿಕೊಂಡಿದ್ದು, ಕುವೆಂಪು ವಿಶ್ವವಿದ್ಯಾಲಯದಲ್ಲಿ ಮಾತ್ರ ಅಳವಡಿಸಿಕೊಂಡಿಲ್ಲ. ABC (Academic Bank of Credit) ಇಲ್ಲದಿರುವುದರಿಂದ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದಾಗ ಕ್ರೆಡಿಟ್ **'0'** ಎಂದು ಬರುತ್ತಿದೆ. ಇದರಿಂದಾಗಿ ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಉದ್ಯೋಗ ಪಡೆಯುವಲ್ಲಿ ತೊಂದರೆಯಾಗುತ್ತಿದೆ. ಈ ಬಗ್ಗೆ ವಿಶ್ವವಿದ್ಯಾಲಯದಲ್ಲಿ 02 ದಿನಗಳ ಕಾರ್ಯಾಗಾರ ಏರ್ಪಡಿಸಿ C.B.C.S. ಜಾರಿಗೆ ತರುವ ಕುರಿತಾಗಿ ಕ್ರಮ ಕೈಗೊಳ್ಳಬೇಕು ಎಂದರು. ಪ್ರೊ.ಜಗನ್ನಾಥ ಕೆ. ಡಾಂಗೆರವರು ಮಾತನಾಡಿ, ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಕಾರಣಾಂತರಗಳಿಂದ ಬಿ.ಇಡಿ. ಪದವಿಗೆ C.B.C.S. ಅಳವಡಿಸಿಕೊಂಡಿರುವುದಿಲ್ಲ. ಶೀಘ್ರದಲ್ಲಿಯೇ ಈ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರು ಇದರ ಕುರಿತಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ CBCS ಅಳವಡಿಸಿಕೊಳ್ಳುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದರು.

**2024:ಎಸಿ–2.19: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2024:ಎಸಿ–2.19(1): ಶ್ರೀ ಡಿ.ಎಸ್.ಅರುಣ್:**

ಈ ಹಿಂದೆ ರಾಜ್ಯದ ಇತರ ವಿಶ್ವವಿದ್ಯಾಲಯಗಳಿಗಿಂತ ಮುಂದಿದ್ದ ಕುವೆಂಪು ವಿಶ್ವವಿದ್ಯಾಲಯವು ಈಗ ಕೆಲವು ವಿಷಯಗಳಲ್ಲಿ ಹಿಂದಿದೆ. ಕುವೆಂಪು ವಿಶ್ವವಿದ್ಯಾಲಯದ ಸಮಸ್ಯೆಗಳು ಹಾಗೂ ಕೊರತೆಗಳ ಕುರಿತಾಗಿ ಸರ್ಕಾರದ ವಿವಿಧ ಸಚಿವರು, ಶಾಸಕರು ಹಾಗೂ ಅಧಿಕಾರಿಗಳನ್ನು ಭೇಟಿಯಾಗಿ ಚರ್ಚಿಸಿದ್ದೇನೆ. ಯು.ಯು.ಸಿ.ಎಂ.ಎಸ್. ನಿಂದ ಸಂಯೋಜನೆ ಪ್ರಕ್ರಿಯೆಯ ಸಮಸ್ಯೆ ಇದೆ. ಮುಂದಿನ ವರ್ಷದ ಸಂಯೋಜನೆ ಪ್ರಕ್ರಿಯೆಗೆ ಈಗಲೇ ಕ್ರಮ ಕೈಗೊಳ್ಳಬೇಕು. ಕೆಲವು ವಿದ್ಯಾರ್ಥಿಗಳು ಎರಡೆರಡು ಬಾರಿ ಶುಲ್ಕ ಪಾವತಿಸಿದ್ದು, ಮರುಭರಿಕೆ ಮಾಡಲು ಕ್ರಮ ಕೈಗೊಳ್ಳಬೇಕು. ಪರೀಕ್ಷಾ ಫಲಿತಾಂಶ ಸಕಾಲದಲ್ಲಿ ಬರುತ್ತಿಲ್ಲ. ಮೂರು ವರ್ಷಗಳಿಂದ ಮಕ್ಕಳಿಗೆ ಅಂಕಪಟ್ಟಿ ನೀಡಿಲ್ಲ. ಫಲಿತಾಂಶದಲ್ಲಿ ಕೂಡ ನಿಖರತೆ ಇಲ್ಲ. ಆದುದರಿಂದ ನಾವೆಲ್ಲರೂ ಒಂದು ನಿಯೋಗ ತೆರಳಿ ಯು.ಯು.ಸಿ.ಎಂ.ಎಸ್. ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡೋಣ ಎಂದರು.

ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಡಾ.ನಾಗರಾಜ ರವರು ಮಾತನಾಡಿ, ಸರ್ಕಾರದಿಂದ ಕೆಲವು ಕಾಲೇಜುಗಳ ಸಂಯೋಜನೆ ಅನುಮೋದನೆಯಾಗಿಲ್ಲ. ಇದರಿಂದಾಗಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಅಂಕಪಟ್ಟಿಗಳನ್ನು ಶೀಘ್ರದಲ್ಲಿಯೇ ನೀಡಲಾಗುವುದು ಎಂದರು.

ಸಭೆಗೆ ವಿಶೇಷ ಆಹ್ವಾನಿತರಾಗಿದ್ದ, ಯು.ಯು.ಸಿ.ಎಂ.ಎಸ್., ನೋಡಲ್ ಅಧಿಕಾರಿಗಳಾದ ಪ್ರೊ.ಎಂ.ಆರ್.ಸತ್ಯಪ್ರಕಾಶ್ ರವರು ಮಾತನಾಡಿ, ಇತ್ತೀಚೆಗೆ ಶ್ರೀ ಆರ್.ವಿ. ದೇಶಪಾಂಡೆರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ವಿಕಾಸಸೌಧದಲ್ಲಿ ನಡೆದ ಸಭೆಯುಲ್ಲಿ ಯು.ಯು.ಸಿ.ಎಂ.ಎಸ್. ಹಾಗೂ ಸಂಯೋಜನೆ ಪ್ರಕ್ರಿಯೆ ಬಗ್ಗೆ ಚರ್ಚೆಯಾಗಿದ್ದು, ಮುಂದಿನ ಸಂಯೋಜನೆ ಪ್ರಕ್ರಿಯೆಯನ್ನು ಇದೇ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಅಕ್ಟೋಬರ್ ಮಾಹೆಯಲ್ಲಿಯೇ ಆರಂಭಿಸಲಾಗುವುದೆಂದು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಇದರಿಂದ ಬಹಳಷ್ಟು ಸಮಯಾವಕಾಶ ಸಿಗುತ್ತದೆ ಹಾಗೂ ಸಮಸ್ಯೆಗಳು ಕಡಿಮೆಯಾಗುತ್ತವೆ ಎಂದರು.

2024:ಎಸಿ–2.19(2): **ಡಾ. ಸಣ್ಣಹನುಮಪ್ಪ :**

ಯು.ಯು.ಸಿ.ಎಂ.ಎಸ್.ನಲ್ಲಿನ ಕೆಲವು ಸಮಸ್ಯೆಗಳನ್ನು ವಿಶ್ವವಿದ್ಯಾಲಯದ ಹಂತದಲ್ಲಿಯೇ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದರು. ಪ್ರೊ. ಸತ್ಯಪ್ರಕಾಶ್ ರವರು ಮಾತನಾಡಿ, ಯು.ಯು.ಸಿ.ಎಂ.ಎಸ್. ನಲ್ಲಿ ಅಫಿಲಿಯೇಷನ್, ಅಡ್ಮಿಷನ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಶೀಲಿಸಿ ಸರಿಪಡಿಸಲು ಕುಲಪತಿಯವರು ಹಾಗೂ ಕುಲಸಚಿವರಿಗೆ, ಪರೀಕ್ಷೆಗೆ ಸಂಬಂಧಪಟ್ಟ ಕಾರ್ಯಗಳನ್ನು ಕುಲಸಚಿವ (ಮೌಲ್ಯಮಾಪನ) ರವರಿಗೆ ನೀಡಿದಲ್ಲಿ ಗರಿಷ್ಠ ಮಟ್ಟದ ಸಮಸ್ಯೆಗಳು ಬಗೆಹರಿಯುತ್ತವೆ ಎಂದರು. ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿಗಳು ಹಾಗೂ ಕಾಲೇಜುಗಳಿಂದ ಬರುವ ಸಮಸ್ಯೆಗಳನ್ನು ವಿಶ್ವವಿದ್ಯಾಲಯದ ಹಂತದಲ್ಲಿ ತಕ್ಷಣವೇ ಸ್ಪಂದಿಸಿ ಬಗೆಹರಿಸಲಾಗುತ್ತಿದೆ. ಆದರೆ, ವಿಶ್ವವಿದ್ಯಾಲಯ ಮಟ್ಟದ ಸಮಸ್ಯೆಗಳು ಸರ್ಕಾರದ ಹಂತದಲ್ಲಿ ಶೀಘ್ರ ಪರಿಹಾರವಾಗುತ್ತಿಲ್ಲ. ಸರ್ಕಾರಕ್ಕೆ ಸಲ್ಲಿಸಲಾಗುವ ಸಮಸ್ಯೆಗಳು ಹಾಗೂ ಇತರೆ ವಿಷಯಗಳಿಗೆ ಟಿಕೇಟಿಂಗ್ ವ್ಯವಸ್ಥೆ ಜಾರಿಗೊಳಿಸಿದ್ದು, ಸಮಸ್ಯೆಗಳನ್ನು ಅಪ್‌ಲೋಡ್ ಮಾಡಿದ ನಂತರ ಟಿಕೇಟ್ ನಂಬರ್ ಬರುತ್ತದೆ. ಟಿಕೇಟ್ ನಂಬರ್ ಪ್ರಕಾರ ಹಂತ ಹಂತವಾಗಿ ಕೈಗೆತ್ತಿಕೊಂಡು ಸರಿಪಡಿಸುತ್ತಾರೆ. ಇದರಿಂದ ವಿಳಂಬವಾಗುತ್ತಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಸಮಸ್ಯೆಗಳ ಪರಿಹಾರಕ್ಕೆ ವಿಶ್ವವಿದ್ಯಾಲಯಗಳಿಗೆ Editing Option ಕೊಟ್ಟರೆ ಸಮಸ್ಯೆಗಳು ಕಡಿಮೆಯಾಗುತ್ತವೆ ಎಂದರು.

ಶ್ರೀ ಡಿ.ಎಸ್.ಅರುಣ್ ರವರು ಮಾತನಾಡಿ, ಎಲ್ಲಾ ಸಮಸ್ಯೆಗಳನ್ನು ಪಟ್ಟಿಮಾಡಿ ಒಂದು ಪ್ರಸ್ತಾವನೆ ಸಿದ್ಧಪಡಿಸಿರಿ. ಯು.ಯು.ಸಿ.ಎಂ.ಎಸ್. ನ ಕೆಲವು ಹಂತದ ಕಾರ್ಯಗಳನ್ನು Decentralization ಮಾಡುವ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಪ್ರಯ್ನತಿಸೋಣ ಎಂದರು. ಎಲ್ಲಾ ಸದಸ್ಯರು ಸಮ್ಮತಿ ಸೂಚಿಸಿ ಆದಷ್ಟು ಬೇಗನೆ ಈ ಕುರಿತಾಗಿ ಕ್ರಮ ವಹಿಸಬೇಕೆಂದರು.

2024:ಎಸಿ–2.19(3): **ಶ್ರೀ ಲಕ್ಷ್ಮೀಶ ಎ.ಎಸ್.**

ಸ್ನಾತಕ ಪದವಿಯಲ್ಲಿ ಪರಿಸರ ವಿಜ್ಞಾನ ಮತ್ತು ಭಾರತ ಸಂವಿಧಾನ ವಿಷಯಗಳ ಬೋಧನಾ ಕಾರ್ಯಭಾರ ಹಾಗೂ ಕ್ರೆಡಿಟ್ಸ್‌ಗಳಿಗೆ ವ್ಯತ್ಯಾಸವಿದೆ. ಪ್ರತಿದಿನ 06 ಗಂಟೆಗಳ ಬೋಧನಾ ತರಗತಿಗಳು ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ. 06 ಗಂಟೆಗಳ ಕಾಲ ಪಾಠ ಕೇಳುವ ತಾಳ್ಮೆ ಇತ್ತೀಚಿನ ವಿದ್ಯಾರ್ಥಿಗಳಲ್ಲಿ ಕಡಿಮೆ ಇದೆ. ವಿವಿಧ ಕಾರಣಗಳಿಂದಾಗಿ ಬಹಷ್ಟು ವಿದ್ಯಾರ್ಥಿಗಳು ಸಂಜೆಯತನಕ ತರಗತಿಯಲ್ಲಿ ಇರಲು ಇಷ್ಟಪಡುವುದಿಲ್ಲ. ಅಲ್ಲದೆ ಹೆಚ್ಚಿನ ಬೋಧನಾ ಅವಧಿಯಿಂದ ವಿದ್ಯಾರ್ಥಿಗಳಿಗೆ ಕ್ರೀಡೆ ಸೇರಿದಂತೆ ಇತರೆ ಪಠ್ಯೇತರ ಚಟುವಟಿಕೆಗಳಿಗೆ ತೊಂದರೆಯಾಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಬೋಧನಾ ಅವಧಿ ಮತ್ತು ಕ್ರೆಡಿಟ್‌ಗಳನ್ನು ವಿದ್ಯಾರ್ಥಿ ಕೇಂದ್ರಿತವಾಗಿ ಸಿದ್ಧಪಡಿಸಬೇಕೇ ಹೊರತು, ಅಧ್ಯಾಪಕ ಕೇಂದ್ರಿತ ಆಗಬಾರದು. ಅಧ್ಯಾಪಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಬೋಧನಾ ಅವಧಿ ನಿರ್ಧಾರವಾಗಬಾರದು. ಇದರಿಂದಾಗಿ ವಿದ್ಯಾರ್ಥಿಗಳ ಅಧ್ಯಯನದ ಮೇಲೆ ಗಂಭೀರವಾದ ಪರಿಣಾಮ ಬೀರುತ್ತದೆ.

ಚರ್ಚೆಯ ನಂತರ ಪರಿಸರ ಅಧ್ಯಯನ ಮತ್ತು ಭಾರತ ಸಂವಿಧಾನ ವಿಷಯಗಳನ್ನು ವರ್ಷಪೂರ್ತಿ ಎರಡೂ ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲು ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಸಹಿ/–

ಕುಲಸಚಿವರು | ಕುಲಪತಿಗಳು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ